 **ಅಸಲು ದಾವ ಸಂಖ್ಯೆಃ 1339/2014**

**ಡಿಡಬ್ಲೂ -1**

**ಗೌರವಾನ್ವಿತ 4 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ.**

ದಿಃ 03-08-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
ಪಾಟೀ ಸವಾಲುಃ ಶ್ರೀ SCJ ವಕೀಲರಿಂದ.

**(ಸಾಕ್ಷಿಗೆ ಕನ್ನಡ ಭಾಷೆ ಬಾರದ ಕಾರಣ ಮರಾಠಿ ಭಾಷೆ ಬರುತ್ತಿದ್ದು ಶ್ರೀ YGG ವಕೀಲರು ರೂ.100 ಗಳ ವೆಚ್ಚದೊಂದಿಗೆ ಕನ್ನಡ ಭಾಷೆಗೆ ತರ್ಜುಮೆಯನ್ನು ಮಾಡಿರುತ್ತಾರೆ )**

ನಾನು 2 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ಎಲ್ಲಿಯವರೆಗೆ ವ್ಯಾಸಂಗ ಮಾಡಿರುತ್ತೇನೆ ಎಂದು ತೋರಿಸಲು ಶಾಲಾ ದಾಖಲೆಗಳನ್ನು ಹಾಜರು ಪಡಿಸಬಹುದು. 2 ನೇ ಪ್ರತಿವಾದಿ ಕೃಷ್ಣಾಬಾಯಿಯವರು ನನ್ನ ತಾಯಿಯಾಗಬೇಕು. ಸದರಿಯವರು ಶಿಕ್ಷಣ ಕಲಿತಿರುವುದಿಲ್ಲ. 3 ನೇ ಪ್ರತಿವಾದಿ ನನ್ನ ಅಣ್ಣನಾಗಬೇಕು. ಸದರಿಯವರು ಶಿಕ್ಷಣ ಕಲಿತಿರುವುದಿಲ್ಲ. ಸದಿರಿಯವರು ಶಾಲೆಗೆ ಹೋಗಿರುವುದಿಲ್ಲ. ನಾನು ಮತ್ತು 3 ನೇ ಪ್ರತಿವಾದಿ ಶಿಕ್ಷಣ ಕಲಿತಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಅಜ್ಜನ ಹೆಸರು ಭೀಮಶು. ನನ್ನ ಅಜ್ಜಿಯ ಹೆಸರು ಲಕ್ಷ್ಮೀ ಎಂದರೆ ಸಾಕ್ಷಿಯು ತನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಅಜ್ಜನಿಗೆ 3 ಜನ ಮಕ್ಕಳು ಎಂದರೆ ಸರಿ. ಅವರುಗಳೆಂದರೆ ಬಾಳಪ್ಪಾ , ಜೋತಿಬಾ ಮತ್ತು ಫಕೀರವ್ವಾ ಎಂದರೆ ಸಾಕ್ಷಿಯು ಬಾಳಪ್ಪಾ ಮತ್ತು ಜೋತಿಬಾ ಮಕ್ಕಳಾಗಿರುತ್ತಾರೆ ಮತ್ತು ಫಕೀರವ್ವಾ ಮಗಳು ಅಲ್ಲ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ಫಕೀರವ್ವಾ ನನ್ನ ಅತ್ತೆಯಾಗಬೇಕು. ಅತ್ತೆ ಎಂದರೆ ಯಾರು ಎಂದರೆ ತಂದೆಗೆ ಸಹೋದರಿ. ಫಕೀರವ್ವಾ ನನ್ನ ತಂದೆಯ ಸಹೋದರಿ ಎಂದರೆ ಸರಿಯಲ್ಲ. ನನ್ನ ಅಜ್ಜನ ಹೆಸರು ಭೀಮಶು ನಿಂಗಾಣಿ ಸಂತಾಜಿ ಇರುತ್ತದೆ. ನನ್ನ ಅಜ್ಜನಿಗೆ 3 ಜನ ಗಂಡು ಮಕ್ಕಳು ಮತ್ತು ಇಬ್ಬರ ಹೆಣ್ಣು ಮಕ್ಕಳು. ನನ್ನ ಅಜ್ಜನ ವಾರಸುದಾರರು ಮೇಲೆ ಹೇಳಿದ 5 ಜನ ಮಕ್ಕಳು ಎಂದು ತೋರಿಸಲು

ವಾರಸಾ ಪ್ರಮಾಣ ಪತ್ರ ಹಾಜರು ಪಡಿಸಲು ಆಗುವುದಿಲ್ಲ. ನನ್ನ ಅಜ್ಜನ ಇಬ್ಬರು ಹೆಣ್ಣು ಮಕ್ಕಳು ಹೆಸರು ಎಂದರೆ ಯಲ್ಲವ್ವಾ ಮತ್ತು ಫಕೀರವ್ವಾ. ನನ್ನ ಅಜ್ಜನಿಗೆ 3 ಜನ ಮಾತ್ರ ಮಕ್ಕಳು ಎಂದರೆ ಸರಿಯಲ್ಲ. ಫಕೀರವ್ವಾ ರವರನ್ನು ಅಪ್ಪಯ್ಯಾಮುಚ್ಚಂಡಿಕರ ರವರಿಗೆ ಮದುವೆ ಮಾಡಿಕೊಡಲಾಗಿತ್ತು ಎಂದರೆ ಸಾಕ್ಷಿಯ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಫಕೀರವ್ವಾ ರವರಿಗೆ ಮಕ್ಕಳಿರಲಿಲ್ಲ ಎಂದರೆ ಸಾಕ್ಷಿಯ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಫಕೀರವ್ವಾ ರವರು ಬಾಳಪ್ಪಾ ರವರನ್ನು ದತ್ತು ತೆಗೆದುಕೊಂಡಿದ್ದರು ಎಂದರೆ ಸರಿ. ಬಾಳಪ್ಪನ ಹೆಂಡತಿಯ ಹೆಸರು ಮೈನಾಬಾಯಿ ಎಂದರೆ ಸರಿ . ಬಾಳಪ್ಪಾ ಮತ್ತು ಮೈನಾಬಾಯಿಯವರರಿಗೆ ದುದ್ದಪ್ಪಾ ಎಂಬ ಒಬ್ಬ ಮಗನಿದ್ದ ಎಂದರೆ ಸರಿ . ದುದ್ದಪ್ಪನ ಹೆಂಡತಿಯ ಹೆಸರು ಲಕ್ಷ್ಮೀಬಾಯಿ ಎಂದರೆ ಸರಿ . ಸದರಿಯವರಿಗೆ 1 ನೇ ಮತ್ತು 2 ನೇ ವಾದಿ ಗಂಡು ಮಕ್ಕಳು ಎಂದರೆ ಸರಿ.

1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿ ಗಂಡ ಹೆಂಡತಿ ಆಗಬೇಕು ಎಂದರೆ ಸರಿ. ನನ್ನ ದೊಡ್ಡ ಅಣ್ಣನ ಹೆಸರು ನಿಂಗಾಣಿ. ನಿಂಗಾಣಿಯವರ ನಂತರ ಫಕೀರಾ ಇರುತ್ತಾರೆ. ಫಕೀರಾ ನಂತರ ಭೀಮಾ ಇರುತ್ತಾರೆ. ಭೀಮಾ ನಂತರ ನಾನು ಕೊನೆಯವನಾಗಿರುತ್ತೇನೆ. ನಮ್ಮ 4 ಜನ ಗಂಡು ಮಕ್ಕಳನ್ನು ಹೊರತು ಪಡಿಸಿ ಬೇರೆ ಮಕ್ಕಳು ಇಲ್ಲ ಎಂದರೆ ಸಾಕ್ಷಿಯು ತಮ್ಮ ಸಹೋದರಿಯರು ಇರುತ್ತಾರೆ ಎಂದು ನುಡಿಯುತ್ತಾರೆ . ನನ್ನ ಅಣ್ಣ ನಿಂಗಾಣಿಯವರು ಮರಣಹೊಂದಿರುತ್ತಾರೆ . ನಿಂಗಾಣಿಯವರ ಹೆಂಡತಿಯ ಹೆಸರು ಲಕ್ಷ್ಮೀ ಅಂದರೆ 6 ನೇ ಪ್ರತಿವಾದಿ ಎಂದರೆ ಸರಿ . ನನ್ನ ಅಣ್ಣ ಫಕೀರಾರವರು 5 ನೇ ಪ್ರತಿವಾದಿ ಯಾಗಿರುತ್ತಾರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

6 ನೇ ಪ್ರತಿವಾದಿಯು ಓ ಎಸ್ ನಂಬರ 1357/12 ನನ್ನ ವಿರುದ್ಧ ಹೂಡಿರುತ್ತಾರೆ ಎಂದರೆ ಸರಿ . ಸದರಿ ದಾವೆ ಚಾಲ್ತಿಯಲ್ಲಿದೆ. ಸದರಿ ದಾವೆಯನ್ನು ನಾವು 3 ಜನ ಅಣ್ಣ ತವಮ್ಮಂದಿರ ಮೇಲೆ ಹೂಡಲಾಗಿತ್ತು. ಸದರಿ ದಾವೆಯನ್ನು ಏಕೆ ಹೂಡಲಾಗಿದೆ ಎಂದುನನಗೆ ಮಾಹಿತಿ ಇಲ್ಲ. ಸದರಿ ದಾವೆಯಲ್ಲಿ ನಾನು ಶ್ರೀ ಎ ಎಲ್ ಸಂದ್ರಿಮನಿ ವಕೀಲರನ್ನು ನೇಮಿಸಿಕೊಂಡಿರುತ್ತೇನೆ. ನಾನು ನಮ್ಮ ವಕೀಲರ ಬಳಿ ಸದರಿ ದಾವೆ ಏಕೆ ಹೂಡಲಾರಿದೆ ಎಂದು ಕೇಳಿರುತ್ತೇನೆ . ನಮ್ಮ ವಕೀಲರು 6 ನೇ ಪ್ರತಿವಾದಿಯ ಎಲ್ಲ ಜಮೀನು ತಮ್ಮ ಹೆಸರಿಗೆ ಬೇಕು ಎಂದು ಹೂಡಿರುತ್ತಾರೆ ಎಂದು ಹೇಳಿರುತ್ತಾರೆ.

ಈ ಪ್ರಸ್ತುತ ದಾವೆಯನ್ನು ಯಾರು, ಯಾರ ಮೇಲೆ ಮತ್ತು ಏಕೆ ಮಾಡಿದ್ದಾರೆ ಎಂದು ನನಗೆ ತಿಳಿದಿದೆ. ಈ ದಾವೆಯನ್ನು ವಾದಿಯು ಅಡಾಪಶನ ಡೀಡಿ ಬಗ್ಗೆ ಮಾಡಿರುತ್ತಾರೆ. ಈ ದಾವೆಯಲ್ಲಿ ವಾದಿಗಳ ಪ್ರಾರ್ಥನೆ ಏನು ಎಂದು ನನಗೆ ತಿಳಿದಿದೆ. ಈ ದಾವೆಯಲ್ಲಿ ವಾದಿಯು ಕಬ್ಜಾ ಕೋರಿ ಪ್ರಾರ್ಥಿಸಿರುತ್ತಾರೆ. ಈ ದಾವೆಯಲ್ಲಿ ವಾದಿಯು ಕಬ್ಜಾ ಕೋರಿ ಪ್ರಾರ್ಥಿಸಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ವಾದಿಗಳ ಮೇಲೆ ಹೂಡಿದ್ದ ದಾವೆಯ ನಂಬರ ತಿಳಿದಿದೆಯೇ ಎಂದು ಪ್ರಶ್ನಿಸಿದರೆ ಸಾಕ್ಷಿಯು ಇದೊಂದೆ ದಾವೆ ಹೂಡಿದ್ದರು ಎಂದು ನುಡಿಯುತ್ತಾರೆ. ನನ್ನ ಪ್ರಕಾರ ಓ ಎಸ್ ನಂಬರ 1339/14 ಹೊರತು ಪಡಿಸಿ ಬೇರೆ ಯಾವುದೇ ದಾವೆ ಇರುವುದಿಲ್ಲವೇ ಎಂದರೆ ಸಾಕ್ಷಿಯು ತನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ವಾದಿಗಳು ದಾವೆ ಹೂಡಿದಾಗಿದಿಂದ ಇಲ್ಲಿಯವರೆಗೆ ಏನು ಕಾಗದಪತ್ರಗಳನ್ನು ಹಾಜರು ಪಡಿಸಿರುತ್ತಾರೆ ನಾನು ನೋಡಿರುವುದಿಲ್ಲ.

ನಮ್ಮ ಊರು ಹಲಗಾ. ಹಲಗಾ ಗ್ರಾಮ ಬೆಳಗಾವಿಯ ಅವಿಭಾಜ್ಯ ಅಂಗವಾಗಿರುತ್ತದೆ ಎಂದರೆ ಸರಿ. ನಾನು ಬೆಳಗಾವಿಯ ನಗರದಲ್ಲಿ ಸಂಚಾರ ಮಾಡುತ್ತೇನೆ. ಸಾಮಾನ್ಯವಾಗಿ ಯಾರ ಸ್ವತ್ತು ಯಾರಿಗೆ ಸೇರಿರುತ್ತದೆಯೋ ಅವರ ಹೆಸರನ್ನು ಸರಕಾರಿ ದಾಖಲೆಗಳಲ್ಲಿ ನಮೂದ ಮಾಡಲಾಗಿರುತ್ತದೆ ಎಂದರೆ ಸರಿ . ಸಾಮಾನ್ಯವಾಗಿ ಕಣ್ಣ ತಪ್ಪಿನಿಂದ ಹೆಸರು ತಪ್ಪಾಗಿ ನಮೂದ ಆಗಿದ್ದರೆ ಅಪೀಲು ಸಲ್ಲಿಸಿ ತಪ್ಪನ್ನು ಸರಿಪಡಿಸಿಕೊಳ್ಳಬಹುದು ಎಂದರೆ ಸರಿ.

ನಾನು ಗೌಂಡಿ (Meson) ಕೆಲಸ ಮಾಡುತ್ತೇನೆ. ಫಕೀರವ್ವಾ ದಿಃ 25-06-1935 ಬಾಳಪ್ಪಾ ರವರನ್ನು ದತ್ತು ತೆಗೆದುಕೊಂಡಿರುತ್ತಾರೆ ಎಂದರೆ ಸರಿ.

ದಿಃ 22-09-1955 ರಲ್ಲಿ ಭೀಮಶು ನಿಂಗಪ್ಪಾ ಸಂತಾಜಿಯವರು ಬಾಳಪ್ಪಾ ಅಪ್ಪಯ್ಯಾ ಮುಚ್ಚಂಡಿಕರ ರವರಿಗೆ ದಾವಾ ಸ್ವತ್ತುಗಳನ್ನು ಖರೀದಿ ನೀಡಿರುತ್ತಾರೆ ಎಂದರೆ ಸಾಕ್ಷಿಯು ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ನೀಡಲಾಗಿರುತ್ತದೆ ಎಂದು ನುಡಿಯುತ್ತಾರೆ . ಸದರಿ ಖರೀದಿ Sub-Registrar ನಲ್ಲಿ ಕಾನೂನು ಬದ್ಧವಾಗಿ ನೋಂದಣಿಯಾಗಿರುತ್ತದೆ ಎಂದರೆ ಸರಿ. ಸದರಿ ಖರೀದಿ ಪತ್ರವನ್ನು ನಾನು 20 ವರ್ಷಗಳ ಹಿಂದೆ ನೋಡಿರುತ್ತೇನೆ. ಸದರಿ ಖರೀದಿ ನಂತರ ದಿಃ 06-01-1956 ರಲ್ಲಿ ಎಮ್.ಇ. ನಂಬರ 1069 ರಂತೆ ಬಾಳಪ್ಪನ ಹೆಸರು ನೋಂದಣಿಯಾಗಿರುತ್ತದೆ ಎಂದರೆ ಸರಿ . ಸದರಿ ಎಮ್.ಇ. ನಂಬರ 1069 ಬಗ್ಗೆ ಮಾಹಿತಿ ಇರುತ್ತದೆ ಎಂದರೆ ಸಾಕ್ಷಿಯು ಕಾಗದ ನೋಡಿದ ಮೇಲೆ ತಿಳಿಯುತ್ತದೆ ಎಂದು ನುಡಿಯುತ್ತಾರೆ. ಸದಗಿ ಎಮ್.ಇ. ನಂಬರ 1069 ಬಗ್ಗೆ 2002 ರಲ್ಲಿ ತಿಳಿಯಿತು. ಬಾಳಪ್ಪಾ ಮುಚ್ಚಂಡಿಯವರು ಯಾವಾಗ ಮರಣ ಹೊಂದಿರುತ್ತಾರೆ ನನಗೆ ತಿಳಿದಿಲ್ಲ. ಸದರಿಯವರು 02-09-1964 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ತನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

2001 ರಲ್ಲಿ ಬಾಳಪ್ಪನ ಮಗ ದುದ್ದಪ್ಪಾ ಮರಣ ಹೊಂದಿರುತ್ತಾರೆ ಎಂದರೆ ಸರಿ. ಬಾಳಪ್ಪನ ಮರಣಾನಂತರ ಅವರ ಮಗ ದುದ್ದಪ್ಪನ ಹೆಸರು ವಾರಸಾ ಆಧಾರದ ಮೇಲೆ ದಾವಾ ಸ್ವತ್ತುಗಳಿಗೆ ಬಂದಿರುತ್ತದೆ ಎಂದರೆ ಸರಿ . ಅದೇ ರೀತಿ ದುದ್ದಪ್ಪಾ ಮರಣಾ ನಂತರ ಅವರ ಮಕ್ಕಳಾದ ವಾದಿಗಳ ಹೆಸರು ಬಂದಿರುತ್ತದೆ ಎಂದರೆ ಸರಿ . ಎಮ್.ಇ. ನಂಬರ 40/2009-10 ರಂತೆ ವಾದಿಗಳ ಹೆಸರು ಎಂಟ್ರಿಯಾಗಿರುತ್ತದೆ ಎಂದರೆ ಸರಿ .

ಓಎಸ್ ನಂಬರ 1844/2012 ದಿಃ 31-08-2013 ರಲ್ಲಿ ವಜಾ ಆಗಿತ್ತು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಲ್ಲಿ ದಾವಾ ಆಸ್ತಿಗಳನ್ನು ಖರೀದ ಮಾಡಿದಾಗಿನಿಂದಲೂ ವಾದಿಗಳ ಅಜ್ಜನ ಹೆಸರು ನಂತರ ವಾದಿಗಳ ಹೆಸರು ಅದದಿನಿಂದ ಇಂದಿನವರೆಗೆ ರೆವಿನ್ಯೂ ದಾಖಲೆಗಳಲ್ಲಿ ಇರುತ್ತವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸ್ವಾಧೀನ ತಮ್ಮ ಬಳಿ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ವಾದಿಗಳು ತೆರಿಗೆ ಪಾವತಿಸುತ್ತಾರೆ ಎಂದರೆ ಸರಿ. ವಾದಿಗಳು ಹಲಗಾದಲ್ಲಿರುವ ತಮ್ಮ ಮನೆ ಮತ್ತು ಹಿತ್ತಲಿಗೆ ತೆರಿಗೆ ಪಾವತಿ ಮಾಡುತ್ತಾರೆ ಎಂದರೆ ಸರಿ . ನಮ್ಮ ಮನೆಗೆ ನಾವು ತೆರಿಗೆ ಪಾವತಿಸುತ್ತೇವೆ.

ದಾವಾ ಆಸ್ತಿಗಳಲ್ಲಿ ವಾದಿಗಳು ಭತ್ತ ಬೆಳೆಯುತ್ತಾರೆ ಎಂದರೆ ಸಾಕ್ಷಿಯು ವಾದಿಗಳು ಕೋಲ್ಲಾಪೂರದಲ್ಲಿ ವಾಸಿಸುತ್ತಾರೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಯಾರು ಯಾವ ಊರಿನಲ್ಲಿ ವಾಸಿಸುತ್ತಾರೆ ಅಲ್ಲಿ ದಾಖಲೆಗಳು ಇರುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ಯಾರಾದರೂ ಮರಣ ಹೊಂದಿದ ನಂತರ ಅವರು ಮರಣ ಹೊಂದಿದ ಸ್ಥಳವನ್ನು ನಮೂದ ಮಾಡಿ ಪ್ರಮಾಣ ಪತ್ರ ನೀಡುತ್ತಾರೆ ಎಂದರೆ ಸರಿ. ನಿಪಿ 2 ರಂತೆ ಬಾಳಪ್ಪಾ ರವರು ಹಲಗಾದಲ್ಲಿ ಮರಣ ಹೋಂದಿರುತ್ತಾರೆ ಎಂದು ಮರಣ ಪ್ರಮಾಣ ಪತ್ರ ನೀಡಲಾಗಿರುತ್ತದೆ ಎಂದರೆ ಸರಿ . ಮತ್ತು ಸದರಿ

ದಾಖಲೆಯಲ್ಲಿ ಮೃತರ ಖಾಯಂ ವಿಳಾಸ ಹಲಗಾ ಎಂದು ತೋರಿಸಲಾಗಿದೆ ಎಂದರೆ ಸಾಕ್ಷಿಯು ತಾನು ಜನಿಸುವ ಮೊದಲೇ ಮರಣ ಹೊಂದಿರುತ್ತಾರೆ ಅದರಿಂದ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ .ನನಗೆ ನನ್ನ ಜನ್ಮ ದಿನಾಂಕ ನೆನಪಿಲ್ಲ. ನನ್ನ ವಯಸ್ಸು ಈಗ 48 ವರ್ಷಗಳು. ದುದ್ದಪ್ಪಾ ರವರು ಮರಣ ಹೊಂದಿದ ಬಗ್ಗೆ ನನಗೆ ತಿಳಿದಿದೆ. ದುದ್ದಪ್ಪಾ ರವರು ಹಲಗಾದಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ಸದರಿಯವರ ಮರಣ ಪ್ರಮಾಣ ಪತ್ರದಲ್ಲೂ ಹಲಗಾ ಎಂದು ತೋರಿಸಲಾಗಿದೆ ಎಂದರೆ ಸರಿ. ನಿಪಿ 7 ರಂತೆ ಸರ್ವೆ ನಂಬರ 142/3 ರಲ್ಲಿ ಬಾಳಪ್ಪಾ ದುದ್ದಪ್ಪಾ ಮುಚ್ಚಂಡಿ ಮತ್ತು ಪೀರಾಜಿ ದುದ್ದಪ್ಪಾ ಮುಚ್ಚಂಡಿ ಎಂದು ನಮೂದ ಆಗಿರುತ್ತದೆ ಎಂದರೆ ಸರಿ. ಸದರಿಯವರ ಹೆಸರು ಮಾಲೀಕರು ಮತ್ತು ಕಬ್ಜೆದಾರರು ಎಂದು ನಮೂದ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿಯವರು ಸ್ವಾಧೀನದಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ 7 ರಲ್ಲಿ ಸದರಿಯವರು ಸ್ವಾಧೀನದಲ್ಲಿ ಇಲ್ಲ ಎಂದು ಬರೆದಿರುವುದಿಲ್ಲ. ದಾವಾ ಆಸ್ತಿಗಳಲ್ಲಿ ವಾದಿಗಳ ಹೆಸರು ಮಾಲೀಕರು ಮತ್ತು ಸ್ವಾಧೀನದಾರರು ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಅವರು ಸ್ವಾಧೀನದಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿಯಿದೆ.**

**ಸಹಿ/-**

**4 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**

**ಬೆಳಗಾವಿ.**